ರೈತರ ಪಂಪ್‌ಸೆಟ್ಟುಗಳಿಗೆ ಠೇವಣಿ ಹಣ ಕಡಿಮೆ ಮಾಡುವುದು.

2331(2879) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದ ರೈತರಿಗೆ ಈ ಹಿಂದೆ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಠೇವಣಿಯ ಹಣ ಕೇವಲ ರೂ. 3000-00 ಇದ್ದುದನ್ನು ಈಗ 25 ಸಾವಿರಕ್ಕೆ ಹೆಚ್ಚಿಸಿರುವುದರಿಂದ ಬಡ ರೈತಾಪಿ ವರ್ಗದವರು ನೀರಾವರಿಯ ಸೌಲಭ್ಯ ಪಡೆಯದೇ ತೊಂದರೆಗೆ ಈಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ನಮ್ಮ ದೇಶದ ಬೆನ್ನೆಲುಬಾದ ರೈತಾಪಿ ವರ್ಗದವರ ಹಿತವನ್ನು ಬದಿಗೊತ್ತಿ ಠೇವಣಿಯ ಮೊತ್ತವನ್ನು ಹೆಚ್ಚಿಸಿರುವುದನ್ನು ಕಡಿಮೆ ಮಾಡುವ ನಿರ್ಧಾರ ಸರ್ಕಾರದ ಮುಂದಿದೆಯೆ; ಹಾಗಿದ್ದಲ್ಲಿ ಎಂದಿನಿಂದ ಕಡಿಮೆ ಮಾಡಲಾಗುವುದು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :—

ಅ) ಈ ಹಿಂದೆ ಸ್ವಯಂ ಆರ್ಥಿಕ ನೆರವಿನ ಯೋಜನೆಯಡಿ ಕೇವಲ ಸರ್ವೀಸ್ ಮೈನ್‌ಗಳ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವ ನೀರಾವರಿ ಪಂಪುಸೆಟ್ಟುಗಳ ಅರ್ಜಿದಾರರುಗಳಿಂದ ರೂ.2500-00ಗಳನ್ನು ಪಾವತಿಸಿಕೊಂಡು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿತ್ತು. ಈಗ ಸ್ವಯಂ ಆರ್ಥಿಕ ನೆರವಿನ ಯೋಜನೆಯನ್ನು ರದ್ದುಪಡಿಸಲಾಗಿದ್ದು, 'ತತ್ಕಾಲ್' ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಈ ಯೋಜನೆಯ ಅನ್ವಯ ಕೇವಲ ಸರ್ವೀಸ್ ಮೈನ್‌ಗಳ ಮೂಲಕ ವಿದ್ಯುತ್ ಸಂಪರ್ಕ ಪಡೆಯುವ ನೀರಾವರಿ ಪಂಪುಸೆಟ್ಟು ಬಳಕೆದಾರರು ರೂ.25,000-00 ಮೊತ್ತವನ್ನು ನೀಡಬೇಕಾಗಿರುತ್ತದೆ.

ಆ. ಈ ಪ್ರಸ್ತಾವನೆಯು ಸದ್ಯಕ್ಕೆ ಪರಿಶೀಲನೆಯಲ್ಲಿರುವುದಿಲ್ಲ.

ದೇವಾಲಯಗಳ ಜೀರ್ಣೋದ್ಧಾರ ಮಂಜೂರಾತಿ.

2335(3239) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಮುಜರಾಯಿ ಇಲಾಖೆಯಿಂದ 1999-2000, 2000-2001 ಮತ್ತು 2001-2002ನೇ ಸಾಲುಗಳಲ್ಲಿ (ಅಂದರೆ 3 ವರ್ಷದ ಅವಧಿಯಲ್ಲಿ) ದೇವಸ್ಥಾನಗಳ ಜೀರ್ಣೋದ್ಧಾರ ಅಥವಾ ಕಟ್ಟಡ ನಿರ್ಮಾಣಕ್ಕೆಂದು ಮಂಜೂರಾತಿ ಕೋರಿ ಬಂದ ಪ್ರಸ್ತಾವನೆಯ ಅರ್ಜಿಗಳು ಎಷ್ಟು? ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಹಣ ಮಂಜೂರಾಗಿದೆ? ಮಂಜೂರಾತಿಯಾದ ವಿವರ ತಿಳಿಸುವುದು?